ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1313 (159)

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 08.03.2022

ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕೋಲಾರ ಜಿಲ್ಲೆಯ ಕೆ.ಜಿ.ಎಫ್ "ಬೆಮೆಲ್ ಕಾರ್ಖಾನೆ" ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಇದನ್ನು ಖಾಸಗೀಕರಣಗೊಳಿಸುತ್ತಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;	ಬಿ.ಇ.ಎಂ.ಎಲ್. ಸಂಸ್ಥೆಯು ಭಾರತ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮವಾಗಿರುತ್ತದೆ. ಭಾರತ ಸರ್ಕಾರದ Cabinet Committee on Economic Affairs (CCEA) ಯು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿ.ಇ.ಎಂ.ಎಲ್)ನ Strategic disinvestment ಗೆ ದಿನಾಂಕ: 27.10.2016 ರಂದು ತಾತ್ವಿಕ ಅನುಮೋದನೆ ನೀಡಿರುತ್ತದೆ. ಅದರನ್ವಯ, ಭಾರತ ಸರ್ಕಾರದ ಹಣಕಾಸು ಸಚಿವಾಲಯ ಹಾಗೂ Department of Investment and Public Asset Management (DIPAM) ಇಲಾಖೆಗಳು ಬಿ.ಇ.ಎಂ.ಎಲ್.ನ. ಆಸ್ತಿಯನ್ನು ಮಾನ್ಯೀಕರಣಗೊಳಿಸಲು (Monetization) ಕ್ರಮ ತೆಗೆದುಕೊಳ್ಳುತ್ತಿರುತ್ತದೆ. ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನ ವಿಧಾನಸಭಾ ಸದಸ್ಯರು ಹಾಗೂ ಲೋಕಸಭಾ ಸದಸ್ಯರುಗಳು ಬಿ.ಇ.ಎಂ.ಎಲ್. ಸಂಸ್ಥೆಯನ್ನು ಖಾಸಗೀಕರಣಗೊಳಿಸದಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಅದರನ್ವಯ ಬಿ.ಇ.ಎಂ.ಎಲ್.ನ ಆಸ್ತಿಯನ್ನು ಮಾನ್ಯೀಕರಣಗೊಳಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಮಾನ್ಯ ಮುಖ್ಯಮಂತ್ರಿಯವರಿಂದ ಭಾರತ ಸರ್ಕಾರದ ರಕ್ಷಣಾ ಸಚಿವರು ಹಾಗೂ ಹಣಕಾಸು ಸಚಿವರುಗಳಿಗೆ ದಿನಾಂಕ: 09.04.2021 ರಂದು ಪತ್ರ ಬರೆದು ಮನವಿ ಮಾಡಲಾಗಿರುತ್ತದೆ.

ಇ	ಲಾಭದಲ್ಲಿರುವ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವ ಉದ್ದೇಶವೇನು;	ರಾಜ್ಯ ಸರ್ಕಾರದ ಮನವಿ ಮೇಲೆ ಭಾರತ ಸರ್ಕಾರವು ಈ ಕೆಳಕಂಡಂತೆ ತಿಳಿಸಿರುತ್ತದೆ: "It is to inform you that the CCEA has given in-principle approval for strategic disinvestment of BEML Ltd. after considering the recommendations of the NITI Aayog. NITI Aayog, while giving its recommendations was of the view that disinvestment of CPSE is likely to bring considerable value addition and improve its performance through infusion of latest technology and superior management practices. Disinvestment will result in growth of production, productivity and employment of the company and this will contribute to the economy of the States concerned and the Country. The process of strategic disinvestment in this case has already progressed to second stage, where the qualified bidders will undertake due diligence before submitting financial bids. Surplus land and non-core assets will not form part of the transaction and shall be hived off through demerger. Further, there will be safeguards for employees and for business continuity in the Share Purchase Agreement. In view of the above, it is our considered opinion that strategic disinvestment of BEML Limited would be in the overall interest of the growth of the company and State's economy."
ಈ	ಒಂದು ವೇಳೆ ಖಾಸಗೀಕರಣಗೊಂಡಲ್ಲಿ, ಇಲ್ಲಿನ ಕಾರ್ಮಿಕರ ಭವಿಷ್ಯವೇನು;	
ಉ	ಈಗಾಗಲೇ ಬಿ.ಜಿ.ಎಂ.ಎಲ್ (ಚಿನ್ನದ ಗಣಿ) ಮುಚ್ಚಿದ್ದು ಅಲ್ಲಿನ ಕಾರ್ಮಿಕ ಹಾಗೂ ಅವರ ಕುಟುಂಬಗಳು ತೊಂದರೆಯಲ್ಲಿದ್ದು, ಈ ಕಾರ್ಖಾನೆಯನ್ನು ಸಹ ಮುಚ್ಚಿದಲ್ಲಿ, ಈ ಕಾರ್ಮಿಕರ ಸ್ಥಿತಿಯೇನು;	
ಊ	ಈ ಬಗ್ಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿದೆಯೇ?	

ಸಿಐ 55 ಎಸ್‌ಪಿಐ 2022

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು